ಊಟ ಮಾಡುತ್ತಿದ್ದ ರಾಮಣ್ಣ ಶಾರಕ್ಕರ ನಡುವೆ ಪಾಂಡು ಮಾಮ, 'ಆಹಾ! ಎಂಥಾ ಹುಳಿ ಮಾಡಿದ್ದೀಯ ರುಕ್ಮಿಣಿ! ಏನು ಘಮ ಎಂಥ ರುಚಿ... ನನ್ನ ಜೀವನದಲ್ಲೇ ಇಂಥದ್ದು ತಿಂದಿರಲಿಲ್ಲ' ಎಂದು ಬಿಟ್ಟ. ರುಕ್ಮಿಣಿ ತುಸು ಲಜ್ಜೆಯಿಂದ ಕಿರುನಕ್ಕು ಒಳಹೊರಟು ಹೋದಳು. ರಾಮಣ್ಣ ಶಾರಕ್ಕ ಮಾತ್ರ ಮುಖ ಮುಖ ನೋಡಿಕೊಂಡರು. ಶಾರಕ್ಕ ಮಾತ್ರ, 'ಇಂಗು–ತೆಂಗು ಇದ್ರೆ ಮಂಗನೂ ಅಡಿಗೆ ಮಾಡಿತಂತೆ' ಎಂದು ಗೊಣಗಿದ್ದು ಯಾರಿಗೂ ಕೇಳಿಸಲಿಲ್ಲ. 'ರುಕ್ಮಿಣಿ ತಗೋ... ಇವು ನನ್ಹೆಂಡ್ತಿ ಸೀರೆಗಳು ನೀನೇ ಉಟ್ಕೋ' ಎಂದು ಪಾಂಡುಮಾಮ ನಾಕು ರೇಶ್ಮೆ ಸೀರೆಗಳನ್ನು ಕೊಟ್ಟಾಗ... ಏನೂ ಮಾತಾಡದೆ ತೆಗೆದುಕೊಂಡು ರುಕ್ಮಿಣಿ ಅದರಲ್ಲೊಂದನ್ನು ಅಂದೇ ಉಟ್ಟುಕೊಂಡೂ ಬಿಟ್ಟಳು. 'ಅದೇನೆ ದಿಗ್ಗಡದಿಮ್ಮಿ... ಇವತ್ತೇನೂಂತ ಈ ರೇಶ್ಮೆ ಸೀರೆ ಉಟ್ಕೊಂಡೆ?' ಎಂದು ಶಾರಕ್ಕ ಕೇಳಿದಾಗ, ಅಲ್ಲೇ ಇದ್ದ ಮಾಮ, 'ಅಯ್ಯೋ ನಾನೇ ಕೊಟ್ಟೆ ಕಣಕ್ಕಾ... ಅವಳದ್ದು, ಇವಳಾದ್ರು ಉಟ್ಟು ಮುಗಿಸಲೀಂತ' ಎಂದು ಬಿಟ್ಟಾಗ ಏನೂ ತೋರದಂತೆ ಶಾರಕ್ಕ ತಬ್ಬಿಬ್ಬಾದರು. ವರಮಹಾಲಕ್ಷ್ಮಿ ಹಬ್ಬದಲ್ಲಿ ಪಾಂಡು ಮಾಮ ಶಾರಕ್ಕನಿಗೂ ರುಕ್ಮಿಣಿಗೂ ಸೀರೆಗಳನ್ನು ತಂದು ಕೊಟ್ಟಾಗ ಮಾತ್ರ ಹೌಹಾರಿಬಿಟ್ಟರು. ಇತ್ತೀಚೆಗೆ ರುಕ್ಮಿಣಿ ಮುತುವರ್ಜಿಯಿಂದ ಪಾಂಡು ಮಾಮನಿಗೆ ಊಟೋಪಚಾರದ ಹೊಣೆ ಹೊತ್ತಂತೆ ಮನೆತುಂಬ ಓಡಾಡುವುದು ಅವರ ನಿದ್ರೆಗೆಡಿಸಿತ್ತು.

ಪಾಂಡು ಮಾಮ ಊರಿಗೆ ಹೋದ ದಿನ... ಅಡಿಗೆಮನೆಯಲ್ಲಿರುವಾಗ ತಾಯಿಮಗ ಮಾಡಿದ ಮಾತುಕತೆಯ ತಿರುಳೇನೆಂದು ಖಚಿತವಾಗಿ ಗೊತ್ತಿಲ್ಲವಾದರೂ... ವ್ಯಾಪಾರಸ್ಥ ರಾಮಚಂದ್ರ ಎಲ್ಲವನ್ನು ಅಳೆದು ತೂಗಿ ನಿರ್ಧರಿಸಬಲ್ಲವನಾದ್ದರಿಂದ... ಒಂದು ಮಹತ್ವದ ಬದಲಾವಣೆ ಅವನ ಮತ್ತು ಶಾರಕ್ಕನ ವರ್ತನೆಯಲ್ಲಾಯಿತು. ಮನೆಯ ಯಾವ ಮಾತಿಗೂ ಅವಳನ್ನು ಕರೆಯದಿದ್ದವರು ಎಲ್ಲಕೂ ಅವಳ ಒಪ್ಪಿಗೆ ಪಡೆಯತೊಡಗಿದರು. ಅಡಿಗೆ ಮನೆಯಲ್ಲಿ ಮಾಮ ತರಕಾರಿ ಕತ್ತರಿಸುವಾಗ ಎಂದೂ ಅಡಿಗೆಗೆ ಕೈಹಾಕದ ಶಾರಕ್ಕ ತಾನು ನಾರು ಬಿಡಿಸಿ ಸೊಪ್ಪು ಸೋಸಿ ಕೊಡತೊಡಗಿದಳು. ಅವಳು ಕೇಳುವ ಮುನ್ನವೇ ಮನೆಗೆ ಸಾಮಾನು ಸರಂಜಾಮುಗಳನ್ನು ತಂದು ಹಾಕತೊಡಗಿದ ರಾಮಣ್ಣ. ವಾರಕ್ಕೆರಡು ದಿನ ಸಂಜೆ ಹೊತ್ತು ಹೆಂಡತಿ ಮಗನನ್ನು ಕರಕೊಂಡು ಹೋಟೆಲಿಗೋ ಸಿನಿಮಾಗೋ ಹೋಗತೊಡಗಿದ ರಾಮಚಂದ್ರ. ಅವಳು ಏನಾದರೂ ಉಟ್ಟು ತೊಟ್ಟಾಗ ಒಂದು ಗಂಭೀರ ಮೆಚ್ಚುಗೆ ಸೂಚಿಸುವಷ್ಟು ಪರಿವರ್ತಿತನಾದ. ಅವಳ ಬಹುಪಾಲು ಸಮಯವನ್ನು ತಾಯಿ–ಮಗ ತಮ್ಮ ಕೇಂದ್ರಕ್ಕೆ ಆಕರ್ಷಿಸಿ ಎಳಕೊಳ್ಳತೊಡಗಿದರು. ಆ ಮನೆಯ ಹಜಾರದ ನಡುಗೋಡೆಗೆ ಹೊಡೆದಿದ್ದ ಮೊಳೆಯೇ ಮಹತ್ವದ್ದೋ ಇಲ್ಲ ಅದಕ್ಕೆ ನೇತು ಹಾಕಿದ್ದ ಬೆಳ್ಳಿಯ ತಗಡಿನ ಪಟವೋ ಗೊತ್ತಾಗಲಿಲ್ಲವವಳಿಗೆ.

**ಉಷಾ ನರಸಿಂಹನ್**

ಕತೆಗಾರ್ತಿ ಉಷಾ ಮೈಸೂರಿನಲ್ಲಿ ನೆಲೆಸಿದ್ದಾರೆ. ಮೂರು ಕಾದಂಬರಿಗಳು, ಎರಡು ಕಥಾಸಂಕಲನಗಳು, ಕವನ ಸಂಕಲನಗಳು ಪ್ರಕಟವಾಗಿವೆ. 'ಮಯೂರ'ವೂ ಸೇರಿದಂತೆ ಅನೇಕ ಪತ್ರಿಕೆಗಳಲ್ಲಿ ಕತೆಗಳು ಪ್ರಕಟವಾಗಿವೆ.